

ಎಡದಿಂದ ಬಲಕ್ಕೆ :

1. ಮುಂಜಾನೆಯ ಸಮಯವೇ ಅಧ್ಯಯನಕ್ಕೆ ಯೋಗ್ಯ, ಸೂಕ್ತ (4)
3. ವಿಷಯದ ಜ್ಞಾನವೇ ಇಲ್ಲ; ಅದಕ್ಕೇ ಈ ವ್ಯಥೆ(3)
4. ವಿರೋಧವನ್ನು ಎದುರಿಸಿ ಎದುರಿಸಿಯೇ ಭಾರೀ ಬೆಳವಣಿಗೆ(3)
6. ನಾಡಿನ ಜನರು ಕಷ್ಟದಲ್ಲಿದ್ದಾಗ ಕೈ ಬಿಟ್ಟಿದ್ದು ಅರ್ಧ ಹಾದಿಯಲ್ಲಿ (4)
7. ಸಾಯುವಾಗ ಆ ಪ್ರಾಣಿಯದು ಎಷ್ಟು ಪ್ರಾಯ ?(3)
9. ಗಣ್ಯ ವ್ಯಕ್ತಿಯಾದರೂ ಆತ ಒಳ್ಳೆಯ ಮಿತ್ರ (3)
11. ವನರಾಶಿಯನ್ನು ರಕ್ಷಿಸುವ ಈ ವಿಧಾನ ತುಂಬ ಈಚಿನದು (3)
13. ಜಯಿಸುವವನಷ್ಟೇ ಅಲ್ಲ ; ಆತ ಒಳ್ಳೆಯ ಮನುಷ್ಯ ಕೂಡ (3)
15. ಮಹನೀಯರಂತಾಗಬೇಕೆಂಬುದೇ ಆತನ ಅಪೇಕ್ಷೆ (4)
17. ಕ್ಷಿಪಣಿಯನ್ನೆಲ್ಲ ಇದ್ದಲ್ಲೇ ಅದೃಶ್ಯವಾಗಿಸುವ ವಿದ್ಯೆ (3)
18. ಮಳೆ ತರುವ ಪ್ರಯತ್ನದಲ್ಲೇ ಹಿಂದುಮುಂದಾದ ಹುಚ್ಚ (3)
19. ಕಟ್ಟಿ ಹಾಕಿಸಲು ತಂದಿದ್ದ ಹಗ್ಗವನ್ನೆಲ್ಲ ಬೆಂಕಿಗೆ ಎಸೆ (4)

ಮೇಲಿಂದ ಕೆಳಕ್ಕೆ :

1. ಸಾಧಾರಣ ಜನರಿಗೆ ತಕ್ಕಂತಹ ವಾಸದ ಮನೆ (3)
2. ಸೋರುವ ಗೋಡೆಗೆ ಹೊಸ ಗಾರೆ ಲೇಪಿಸು (3)
3. ಹಳೆಯ ವಾದ್ಯಗಳ ಬಳಕೆಗೆ ಬೀಳ್ಕೊಡುಗೆ (3)
5. ನಾವೆಣಿಸಿದಂತಲ್ಲ, ಅದೊಂದು ಸಿರಿಧಾನ್ಯ(3)
7. ವಜ್ರವನ್ನು ಮಾರುವ ಕಾರ್ಯವನ್ನು ತ್ಯಜಿಸುವುದು ಎಂದರೆ ? (3)
8. ಮೋಸವನ್ನು ತಪ್ಪಿಸಿದ್ದಕ್ಕೆ ಭಾರೀ ಸಂತಸ (3)
9. ಗಣಿ ತೋಡಿಸುವಾಗ ದೊರೆತದ್ದು ಈ ಗೆಡ್ಡೆ ತರಕಾರಿ (3)
10. ಪುರಾತನ ಯಂತ್ರವನ್ನು ಸರಿಪಡಿಸುವ ಪ್ರಯತ್ನ ನಡೆದಿದೆ (3)
12. ಒಳ್ಳೆಯದಾಯಿತು ಬಿಡಿ, ಆಹ್ವಾನಕ್ಕೆ ತಾಂಬೂಲ (3)
14. ಮುಂಜಾನೆಯಲ್ಲಿ ಸಂಭವಿಸಿದ್ದು ಆಕೆಯ ಹುಟ್ಟು (3)
15. ಮೂರೆಣಿಸುವುದರಲ್ಲಿ ಸೋಲುವಂತೆ ಮಾಡು (3)
16. ಕೊಳೆತದ್ದಾದರೂ ಹಿಂದು ಮುಂದು ಮಾಡಿದರೆ ಭಾರೀ ಹೊಳಪು (3)

## 16-3-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಹನೀಯ 3. ಪ್ರಮಾದ 4. ಕ್ಷಿತಿಜ 6. ಕಲರವ 8. ಸಾಮಯಿಕ 10. ರಸಹೀನ 12. ನಮಸ್ಕಾರ 16. ಯಮಳ 17. ಸಜ್ಜನ 18. ತುರಂಗಮ

ಮೇಲಿಂದ ಕೆಳಕ್ಕೆ :

1. ಸದನ 2. ಯಕ್ಷಿಣಿ 3. ಪ್ರಖರ 5. ಜನುಮ 6. ಕನವರ 7. ವರ್ತಮಾನ 8. ಸಾವಧಾನ 9. ಕಲಾಕಾರ 11. ಹೀನಾಯ 13. ಮರ್ದನ 14. ಹಳತು 15. ಅಸಮ

# ಇಗ್ವಾನಾ ಎಂಬ ಹಲ್ಲಿ!

ಇಗ್ವಾನಾ ಅದೊಂದು ಸರೀಸೃಪ. ಸ್ಪಷ್ಟವಾಗಿ ಹೇಳಬೇಕೆಂದರೆ ಅದೊಂದು ವಿಧದ ಹಲ್ಲಿ. ಪ್ರಸ್ತುತ ಸುಮಾರು 8,000 ಪ್ರಭೇದಗಳಿರುವ, 26 ಕುಟುಂಬಗಳಾಗಿ ವರ್ಗೀಕರಣಗೊಂಡಿರುವ ಹಲ್ಲಿ ವರ್ಗದಲ್ಲಿ ಇಗ್ವಾನಾಗಳದು ಒಂದು ವಿಶಿಷ್ಟ ಪುಟ್ಟ ಕುಟುಂಬ. ಈಗ್ಗೆ 22 ಕೋಟಿ ವರ್ಷಗಳ ಹಿಂದಿನಿಂದ ಧರೆಯಲ್ಲಿದ್ದು, 35 ಪ್ರಭೇದಗಳಿಂದ ಕೂಡಿರುವ ಇಗ್ವಾನಿಡೇ ಕುಟುಂಬವೇ ಧರೆಯ ಅತ್ಯಂತ ಪ್ರಾಚೀನ ಹಲ್ಲಿ ಕುಟುಂಬ ಕೂಡ ಆಗಿದೆ. 'ನೀಳವಾದ ದಷ್ಟ ಪುಷ್ಟ ಶರೀರ, ಚಾವಟಿಯಂತೆ ಉದ್ದವಾದ ಬಲಿಷ್ಠ ಬಾಲ, ಕತ್ತಿನಿಂದ ತೂಗುಬಿದ್ದ ಚರ್ಮದ ಚೀಲಗಳು, ತಲೆ ಬೆನ್ನು ಬಾಲಗಳ ಮೇಲೆ ಮೂಳೆ ಮುಳ್ಳುಗಳು' ಇವು ಇಗ್ವಾನಾಗಳ ವಿಶೇಷ ದೈಹಿಕ ಲಕ್ಷಣಗಳು (ಚಿತ್ರ 1, 2).

ಇಗ್ವಾನಾಗಳ ನೈಸರ್ಗಿಕ ವಾಸಕ್ಷೇತ್ರ ಮಧ್ಯ ಅಮೆರಿಕದ ಸಮಭಾಜಕದ ಆಸುಪಾಸಿನ ಪ್ರದೇಶಗಳಿಗಷ್ಟೇ ಸೀಮಿತ. ಆ ಪ್ರದೇಶದ ಎಲ್ಲ ಜೀವಾವಾರಗಳಲ್ಲೂ, ಎಂದರೆ ವೃಷ್ಟಿವನ, ಜೌಗು ಭೂಮಿ, ತಗ್ಗು ನೆಲದ ಅಡವಿ, ಕಡಲ ದಂಡೆ ಇತ್ಯಾದಿ ಎಲ್ಲ ಕಡೆಗಳಲ್ಲೂ ಇಗ್ವಾನಾಗಳು ನೆಲೆಸಿವೆ. ಈ ಹಲ್ಲಿಗಳದು ಪ್ರಭೇದದಿಂದ ಪ್ರಭೇದಕ್ಕೆ ತುಂಬ ವಿಭಿನ್ನ ಉದ್ದ, ಗಾತ್ರ, ವರ್ಣ ವಿನ್ಯಾಸ ಮತ್ತು ನಡವಳಿಕೆ.

ಇಗ್ವಾನಾ ಗಳದು ಸಾಧು ಸ್ವಭಾವ. ಬಹುಪಾಲು ಎಲ್ಲ ಪ್ರಭೇದಗಳದೂ ಕೇವಲ ಎಲೆಗಳು, ಹೂಗಳು, ಹಣ್ಣುಗಳು ಇತ್ಯಾದಿ ಸಸ್ಯಾಹಾರ. ಕೆಲವೇ ಪ್ರಭೇದಗಳು ಮಾತ್ರ ಕೀಟಗಳನ್ನೂ ಹಿಡಿದು ತಿನ್ನುತ್ತವೆ. ಸರಾಸರಿ 20 ವರ್ಷಕಾಲ ಬದುಕುವ ಈ ಹಲ್ಲಿಗಳ ಅತ್ಯಂತ ಪುಟ್ಟ ಪ್ರಭೇದ 'ಸ್ಪೈನೀ ಟೈಲ್ಡ್ ಇಗ್ವಾನಾ' 5 ರಿಂದ 39 ಅಂಗುಲ ಉದ್ದ ಬೆಳೆದರೆ 'ಹಸಿರು ಇಗ್ವಾನಾ' ಪ್ರಭೇದದ್ದು 5 ರಿಂದ 7 ಅಡಿ ಗಳಷ್ಟು ಉದ್ದದ ಬಹು ದೀರ್ಘ ಶರೀರ. ಅತ್ಯಧಿಕ ತೂಕದ 'ನೀಲಿ ಇಗ್ವಾನಾ' ( ಚಿತ್ರ 2 )14 ಕಿಲೋ ತೂಗುತ್ತದೆ. ಶತ್ರುಗಳು ಎದುರಾದಾಗ ಇಗ್ವಾನಾಗಳು ಇತರ ಕೆಲ ಹಲ್ಲಿಗಳಂತೆ ಬೆದರಿಸುವ ಮಾರುವೇಷ ಪ್ರದರ್ಶಿಸುವುದಾಗಲೀ (ಚಿತ್ರ 3), ಬಾಲವನ್ನು



ಕಳಚಿ ಹಾಕಿ ತಪ್ಪಿಸಿಕೊಳ್ಳುವುದಾಗಲೀ ಮಾಡುವುದಿಲ್ಲ. ಬದಲಾಗಿ ತಮ್ಮ ಚಾಟಿಯಂತಹ ಬಾಲವನ್ನು ನೆಲಕ್ಕೆ ಬಡಿದು ಬೆದರಿಸುತ್ತವೆ; ಹಾಗೂ ಮೇಲರಗುವ ಶತ್ರುವನ್ನು ತಮ್ಮ ಮೊನಚಾದ ಹಲ್ಲುಗಳಿಂದ ಕಚ್ಚುತ್ತವೆ.

ಮತ್ತೂ ವಿಶೇಷ ಏನೆಂದರೆ ಮಧ್ಯ ಅಮೆರಿಕದ ಪ್ರದೇಶಗಳಲ್ಲಿ ಇಗ್ವಾನಾಗಳು ಮನುಷ್ಯರಿಗೆ ತುಂಬ ಜನಪ್ರಿಯವಾಗಿರುವ ಆಹಾರವೂ ಆಗಿವೆ. ಎಷ್ಟೆಂದರೆ ಅದಕ್ಕಾಗಿಯೇ ಭಾರೀ ಗಾತ್ರದ ಹಸಿರು ಇಗ್ವಾನಾಗಳನ್ನು ಸಾಕಿ ಬೆಳಸುವ 'ಇಗ್ವಾನಾ ಫಾರ್ಮ್'ಗಳೇ ಅಲ್ಲಿ ಬೇಕಾದಷ್ಟಿವೆ. ಇನ್ನೂ ವಿಸ್ಮಯ ಏನೆಂದರೆ ಇಗ್ವಾನಾಗಳು ಬೆಕ್ಕು ನಾಯಿಗಳಂತೆ ಮುದ್ದಿನ ಸಾಕುಪ್ರಾಣಿಗಳಾಗಿಯೂ ಬಹಳ ಬೇಡಿಕೆಯಲ್ಲಿವೆ. ವರ್ಣಮಯ ಚರ್ಮ ವಿನ್ಯಾಸದ ಇಗ್ವಾನಾ ಪ್ರಭೇದಗಳಿಗೆ ಪ್ರತಿಯೊಂದಕ್ಕೂ 25 ರಿಂದ 30 ಸಾವಿರ ರೂ. ಗಳಷ್ಟು ಬೆಲೆ ಇದೆ !

■ ಎನ್. ವಾಸುದೇವ್